# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 147 (206)
2. ಸದಸ್ಯರ ಹೆಸರು : ಶ್ರೀ ಬಿ.ಎಂ. ಫಾರೂಖ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 14.02.2023
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನ ಮುಡಿಪು ವ್ಯಾಪ್ತಿಯಲ್ಲಿ ಕೆನರಾ ಇಂಡಸ್ಟ್ರಿಯಲ್ ಏರಿಯಾ (CIA) ದಶಕಗಳ ಹಿಂದೆಯೇ ಸ್ಥಾಪನೆಯಾಗಿದ್ದು, ಭೂ ಸ್ವಾಧೀನ ಪ್ರಕ್ರಿಯೆ ಮುಗಿದರೂ ಇನ್ನೂ ಯಾವುದೇ ಉದ್ದಿಮೆಗಳಿಗೆ ಹಂಚಿಕೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br><br>ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಕೆನರಾ 1 ಮತ್ತು 2ನೇ ಹಂತದ ಕೈಗಾರಿಕಾ ಪ್ರದೇಶಗಳಿಗಾಗಿ ಭೂಸ್ವಾಧೀನಪಡಿಸಿದ ಜಮೀನಿನ ವಿವರ ಈ ಕೆಳಕಂಡಂತಿದೆ:-<br><br>ಕೆನರಾ 1ನೇ ಹಂತ — 585-66 ಎಕರೆ<br>ಕೆನರಾ 2ನೇ ಹಂತ — 125-29 ಎಕರೆ<br><br>ಈ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಜಮೀನನ್ನು ಕಲಂ 28(8)ರಡಿ ಮಂಡಳಿಗೆ ಹಸ್ತಾಂತರಿಸಲಾಗಿದೆ. |
| (ಆ) | ಹಾಗಿದ್ದಲ್ಲಿ ಇನ್ನು ಹಂಚಿಕೆಯಾಗದೇ ಅಭಿವೃದ್ಧಿಪಡಿಸದಿರುವುದಕ್ಕೆ ಕಾರಣಗಳೇನು; (ಅಂಕಿ ಅಂಶಗಳ ಸಹಿತ ವಿವರ ನೀಡುವುದು) | ಕೆನರಾ 1ನೇ ಹಂತದ ಕೈಗಾರಿಕಾ ಪ್ರದೇಶದ ಒಟ್ಟು 585-66 ಎಕರೆ ವಿಸ್ತೀರ್ಣದ ಪೈಕಿ ಸುಮಾರು 213-90 ಎಕರೆ ಜಮೀನು ಭಾಗಶಃ ಸಮತಟ್ಟಾಗಿದ್ದು ಇದರಲ್ಲಿ 113-90 ಎಕರೆ ಜಮೀನನ್ನು ಜಿಲ್ಲಾ ಕೇಂದ್ರ ಕಾರಾಗೃಹ ಮತ್ತು ಕರ್ನಾಟಕ ರಾಜ್ಯ ಮೀಸಲು ಪೋಲಿಸ್ ಇಲಾಖೆಗೆ ಹಂಚಿಕೆ ಮಾಡಲಾಗಿದೆ.<br><br>55-76 ಎಕರೆ ಜಮೀನನ್ನು ಸಂಪರ್ಕ ರಸ್ತೆಗಳಿಗೆ ಉಪಯೋಗಿಸಿಕೊಳ್ಳಲಾಗಿದೆ. ಉಳಿಕೆ 100-00 ಎಕರೆ ಜಮೀನು ಭಾಗಶಃ ಸಮತಟ್ಟಾಗಿದ್ದು ಹಂಚಿಕೆ ಮಾಡಬಹುದಾಗಿದೆ. ಸುಮಾರು 316-00 ಎಕರೆ ಜಮೀನು ಮೇಲ್ನೋಟಕ್ಕೆ ಗುಡ್ಡ ಮತ್ತು ಇಳಿಜಾರು ಪ್ರದೇಶವಾಗಿ ಕಂಡುಬರುತ್ತದೆ. |

| | | |
|---|---|---|
| | | ಈ ಕೈಗಾರಿಕಾ ಪ್ರದೇಶದಲ್ಲಿ ಮುಖ್ಯ ರಸ್ತೆಯನ್ನು ನಿರ್ಮಿಸಲಾಗಿದ್ದು, ಚರಂಡಿ, ಬೀದಿ ದೀಪ ಸೌಕರ್ಯ ಒದಗಿಸಲಾಗಿದೆ.<br>ಕೆನರಾ 2ನೇ ಹಂತದ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿದ ಒಟ್ಟು 125-29 ಎಕರೆ ಜಮೀನು ಗುಡ್ಡ ಮತ್ತು ಇಳಿಜಾರು ಪ್ರದೇಶಗಳಿಂದ ಕೂಡಿದ್ದು, ಇದರ ಉಪಯುಕ್ತತೆ ಬಗ್ಗೆ ಮಂಡಳಿಯಿಂದ ಕ್ರಮ ಕೈಗೊಳ್ಳಲು ಬಾಕಿ ಇರುತ್ತದೆ. |
| (ಇ) | ಭೂಮಿ ಕೊಟ್ಟು, ಉಳಿಕೆ ಜಮೀನು ""ಲ್ಯಾಂಡ್-ಲಾಕ್" ಆದ ರೈತರಿಗೆ ರಸ್ತೆ ಸಂಪರ್ಕ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಸ್ಥಳ ಪರಿಶೀಲನೆಯಲ್ಲಿ ಕಂಡುಬಂದಂತೆ ಕೆನರಾ ಕೈಗಾರಿಕಾ ಪ್ರದೇಶದ ಭೂಸ್ವಾಧೀನತೆಯಿಂದ ಯಾವುದೇ ಜಮೀನು ರಸ್ತೆ ಸಂಪರ್ಕವನ್ನು ಕಳೆದುಕೊಂಡಿರುವುದಿಲ್ಲ. ಕೈಗಾರಿಕಾ ನಿವೇಶನ ಅಭಿವೃದ್ಧಿಪಡಿಸಿದ ನಂತರ ಜಮೀನುಗಳಿಗೆ ಸಂಪರ್ಕ ಕಡಿತವಾಗಬಹುದು.<br>ಆದಾಗ್ಯೂ, ಚೇಳೂರು ಗ್ರಾಮದ ಸರ್ವೆ ನಂಬರ್ 201(ಪಿ) ಮತ್ತು ಇತರೆ ಸರ್ವೆ ನಂಬರುಗಳಲ್ಲಿರುವ ಜಮೀನಿಗೆ ಮುಡಿಪು-ಕುರ್ನಾಡು ರಸ್ತೆಯಿಂದ ಹೊಂದಿರುವ ಕಚ್ಚಾ ರಸ್ತೆಯಿಂದ ಸಂಪರ್ಕ ಪಡೆಯುವ ಅವಕಾಶವಿರುತ್ತದೆ. |
| (ಈ) | CIA ರಸ್ತೆ ಅಭಿವೃದ್ಧಿಗೆ ಕರೆಯಲಾದ 40 ಕೋ.ರೂ. ಟೆಂಡರ್‌ನ ಪ್ರಗತಿ ಏನು; | ಕೆನರಾ ಕೈಗಾರಿಕಾ ಪ್ರದೇಶದ ಉಪಬಡಾವಣೆ ಬಗ್ಗೆ ಗುತ್ತಿಗೆದಾರರಿಗೆ ರೂ.35.67 ಕೋಟಿಗಳಿಗೆ ಟೆಂಡರ್ ಆದೇಶ ನೀಡಲಾಗಿದ್ದು, ಈ ಪ್ರದೇಶವು ಬೆಟ್ಟ, ಗುಡ್ಡ, ಇಳಿಜಾರು ಪ್ರದೇಶದಿಂದ ಕೂಡಿದ್ದು, ಕಾಮಗಾರಿ ನಿರ್ವಹಿಸಲು ಸಾಧ್ಯವಿಲ್ಲದೆ ಇರುವುದರಿಂದ ಹಾಗೂ ಕೇಂದ್ರ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಿಂದ ಪರಿಸರ ವಿಮೋಚನಾ ಪತ್ರ ಜಾರಿಯಾದ ನಂತರ ಕ್ರಮಕೈಗೊಳ್ಳಲಾಗುತ್ತದೆ. |
| (ಉ) | ಹಂಚಿಕೆಯಾದ ಟೆಂಡರ್ ಕಾಮಗಾರಿ ಇನ್ನೂ ಆರಂಭವಾಗದಿರುವುದಕ್ಕೆ ಕಾರಣಗಳೇನು; CIA ಅನ್ನು ಕಾರ್ಯಗತಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | |

ಸಂಖ್ಯೆ: ಸಿಐ 15 ಐಎಪಿ (ಇ) 2023

(ಡಾ॥ ಮುರುಗೇಶ ಆರ್. ನಿರಾಣಿ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು